## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 790 |
| 2 | ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ<br>(ವಿಧಾನ ಸಭಾ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | : | 10.03.2026 |
| 4 | ಉತ್ತರಿಸುವವರು | : | ಗಣಿ ಮತ್ತು ಭೂವಿಜ್ಞಾನ ಹಾಗೂ<br>ತೋಟಗಾರಿಕೆ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಪ್ರಸ್ತುತ ರಾಜ್ಯದಲ್ಲಿ ಗಣಿಗಾರಿಕೆ ಮಾಡಲು ಪರವಾನಗಿ ಪಡೆದ ಕಂಪನಿಗಳ ಸಂಖ್ಯೆ ಎಷ್ಟು; ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿರುವ ಕಂಪನಿಗಳ ಸಂಖ್ಯೆ ಎಷ್ಟು; ಗಣಿಗಾರಿಕೆ ಮಾಡುವಾಗ ಸರ್ಕಾರದ ನಿಯಮಗಳನ್ನು ಪಾಲಿಸದೇ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ;</td><td>
ರಾಜ್ಯದಲ್ಲಿ ಮುಖ್ಯ ಖನಿಜ ಮತ್ತು ಉಪಖನಿಜಗಳ ಗಣಿಗಾರಿಕೆಗೆ ಮಂಜೂರು ಮಾಡಿರುವ ಗುತ್ತಿಗೆ/ಲೈಸೆನ್ಸ್ ಸಂಖ್ಯೆಯ ವಿವರ ಕೆಳಕಂಡಂತಿದೆ:
<table>
<tr><th>ಕ್ರ.ಸಂ</th><th>ಖನಿಜಗಳ ವಿಧ</th><th>ಮಂಜೂರಾದ ಒಟ್ಟು ಗುತ್ತಿಗೆಗಳ ಸಂಖ್ಯೆ</th></tr>
<tr><td>1</td><td>ಮುಖ್ಯ ಖನಿಜ</td><td>234</td></tr>
<tr><td>2</td><td>ನಿರ್ದಿಷ್ಟ ಉಪಖನಿಜ</td><td>733</td></tr>
<tr><td>3</td><td>ನಿರ್ದಿಷ್ಟವಲ್ಲದ ಉಪಖನಿಜ</td><td>3286</td></tr>
</table>
<ul>
<li>ಪ್ರಸ್ತುತ ಮುಖ್ಯ ಖನಿಜ ಗಣಿಗಾರಿಕೆ ಮಾಡುವಾಗ ಸರ್ಕಾರದ ನಿಯಮಗಳನ್ನು ಪಾಲಿಸದೇ ಇರುವ ಪ್ರಕರಣಗಳು ವರದಿಯಾಗಿರುವುದಿಲ್ಲ.</li>
<li>ರಾಜ್ಯದಲ್ಲಿ ಅಕ್ರಮ ಕಲ್ಲುಗಣಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪ್ರಕರಣಗಳನ್ನು ಪತ್ತೆ ಹಚ್ಚಿದ್ದು, ಅಕ್ರಮ ಗಣಿ ಚಟುವಟಿಕೆ ನಡೆಸುತ್ತಿದ್ದವರ ವಿರುದ್ಧ ಎಂ.ಎಂ.ಡಿ.ಆರ್ ಅಧಿನಿಯಮ 1957 (MMDR ACT 1957) ಮತ್ತು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು 1994 (Karnataka Minor Mineral Concession Rules, 1994) ರ ನಿಯಮಗಳಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡವನ್ನು ವಿಧಿಸಿ ಸಂಗ್ರಹಿಸಲಾಗಿರುತ್ತದೆ. ಈ ರೀತಿ ಕಳೆದ ಮೂರು ವರ್ಷಗಳಲ್ಲಿ ಅಕ್ರಮ ಕಲ್ಲುಗಣಿಗಾರಿಕೆ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮದ ವಿವರ ಕೆಳಕಂಡಂತಿದೆ;</li>
</ul>
<table>
<tr><td>1.</td><td>2023-24</td><td>784</td><td>919.17</td><td>189</td></tr>
<tr><td>2.</td><td>2024-25</td><td>657</td><td>715.83</td><td>186</td></tr>
<tr><td>3.</td><td>2025-26</td><td>553</td><td>489.82</td><td>171</td></tr>
<tr><td colspan="2">ಒಟ್ಟು</td><td>1994</td><td>2124.82</td><td>546</td></tr>
</table>
<ul>
<li>ಕಲ್ಲುಗಣಿ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ಸಂಚಿತ ಆಡಿಟ್ ಪ್ರಮಾಣಕ್ಕಿಂತ ಅಧಿಕವಾಗಿ ಉಪ ಖನಿಜ ತೆಗೆದು ರಾಜಧನ ಪಾವತಿಸದೆ ಸಾಗಾಣಿಕೆ ಮಾಡಿರುವ ಪ್ರಮಾಣ ಹಾಗೂ ಗುತ್ತಿಗೆ ಪ್ರದೇಶದ ಒತ್ತುವರಿ ಗಣಿಗಾರಿಕೆಯಿಂದ ಉತ್ಪಾದಿಸಿ ಸಾಗಾಣಿಕೆ ಮಾಡಿರುವ ಪ್ರಕರಣಗಳು ಕಂಡುಬಂದಿರುತ್ತವೆ.</li>
</ul>
</td></tr>
</table>

| | | |
|---|---|---|
| | | • ಸದರಿ ಕಲ್ಲುಗಣಿ ಗುತ್ತಿಗೆ ಪ್ರದೇಶಗಳನ್ನು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC) ಬೆಂಗಳೂರು ಈ ಸಂಸ್ಥೆಯ ಸಹಯೋಗದೊಂದಿಗೆ DGPS ಮತ್ತು Drone ಸಮೀಕ್ಷೆ ನಡೆಸಿ Surface Plan ಸಿದ್ಧಪಡಿಸಿ Reduced Level ಗಳನ್ನು ಘನೀಕರಿಸಿ, ಸದರಿ ಗುತ್ತಿಗೆ/ಲೈಸೆನ್ಸ್ ಪ್ರದೇಶದಲ್ಲಿ ಉಪಖನಿಜ (ಕಟ್ಟಡ ಕಲ್ಲು) ತೆಗೆದು ರಾಜಧನ ಪಾವತಿಸದೆ ಸಾಗಾಣಿಕೆ ಮಾಡಿರುವ ಪ್ರಮಾಣ ಹಾಗೂ ಒತ್ತುವರಿ ಗಣಿಗಾರಿಕೆಯಿಂದ ಉತ್ಪಾದಿಸಿ ಸಾಗಾಣಿಕೆ ಮಾಡಿರುವ ಪ್ರಮಾಣವನ್ನು ಅಂದಾಜಿಸಿರುವ ವರದಿಯನ್ನು ಪಡೆಯಲಾಗಿರುತ್ತದೆ.<br>ಮೇಲಿನ ಉಲ್ಲಂಘನೆಗಳನ್ನು ಇತ್ಯರ್ಥಪಡಿಸಲು, ಕರ್ನಾಟಕ ಸರ್ಕಾರವು ಕರ್ನಾಟಕ ಉಪ ಖನಿಜ ರಿಯಾಯಿತಿ (KMMC) (ತಿದ್ದುಪಡಿ) ನಿಯಮಗಳು, 2026 ನ್ನು ಜಾರಿಗೆ ತಂದಿದ್ದು, ನಿಯಮ 44 A ಅಡಿಯಲ್ಲಿ ಒಂದು ಬಾರಿಯ ತೀರುವಳಿ (One Time Settlement) ಯೋಜನೆಯನ್ನು ಪರಿಚಯಿಸಿದೆ. ಸದರಿ ನಿಯಮದಂತೆ (ಕಟ್ಟಡ ಕಲ್ಲು) ತೆಗೆದು ರಾಜಧನ ಪಾವತಿಸದೆ ಸಾಗಾಣಿಕೆ ಮಾಡಿರುವ ಪ್ರಮಾಣ ಹಾಗೂ ಒತ್ತುವರಿ ಗಣಿಗಾರಿಕೆಯಿಂದ ಉತ್ಪಾದಿಸಿ ಸಾಗಾಣಿಕೆ ಮಾಡಿರುವ ಪ್ರಮಾಣಕ್ಕೆ ಅನುಗುಣವಾಗಿ ದಂಡವನ್ನು ಸಂಗ್ರಹಿಸಲು ಕ್ರಮಕೈಗೊಳ್ಳಲಾಗಿದೆ. |
| (ಆ) | ಗಣಿಗಾರಿಕೆ ಮಾಡಿದ ಮೇಲೆ ಉಪಯೋಗಕ್ಕೆ ಬಾರದ ಮಣ್ಣು ಮತ್ತು ಕಲ್ಲುಗಳನ್ನು ರಾಶಿ ರಾಶಿಯಾಗಿ ಅನುಮತಿ ನೀಡಿದ ಗಣಿಗಾರಿಕೆಯ ಪ್ರದೇಶಕ್ಕಿಂತ ಇತರೆ ಜಮೀನಿನಲ್ಲಿ ಹಾಕಿರುವುದರಿಂದ ಅಕ್ಕ ಪಕ್ಕದ ರೈತರ ಜಮೀನಿಗೆ, ಅವರು ಬೆಳೆಯುವ ಬೆಳೆಗಳು ನಾಶವಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿರುವುದು ಕೆಲವು ಕಡೆ ಕಂಡು ಬಂದಿದ್ದು, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು? | • ಮುಖ್ಯ ಖನಿಜ ಗಣಿಗಾರಿಕೆಗೆ ಸಂಬಂಧಿಸಿದಂತೆ ಈ ರೀತಿ ಯಾವುದೇ ಪ್ರಕರಣಗಳು ಇರುವುದಿಲ್ಲ.<br>• ಉಪಖನಿಜ ಗಣಿಗಾರಿಕೆಗೆ ಸಂಬಂಧಿಸಿದಂತೆ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು 1994ರ (Karnataka Minor Mineral Concession Rules, 1994) ನಿಯಮ-8-N(6) ರಂತೆ ಗಣಿಗಾರಿಕೆಯಿಂದ ಉತ್ಪಾದನೆಯಾದ ತ್ಯಾಜ್ಯವನ್ನು ಗುತ್ತಿಗೆ ಪ್ರದೇಶಕ್ಕೆ ಹೊಂದಿಕೊಂಡಂತೆ ಸರ್ಕಾರಿ / ಪಟ್ಟಾ ಜಮೀನುಗಳಲ್ಲಿ ಸಂಬಂಧಪಟ್ಟ ಇಲಾಖೆಗಳ ಅನುಮತಿ ಪಡೆದು ದಾಸ್ತಾನು ಮಾಡಲು ಅವಕಾಶವಿರುತ್ತದೆ.<br>• ಗಣಿಗಾರಿಕೆ ನಡೆಸಲು ಕೃಷಿಯೇತರ ಜಮಿನಿನಲ್ಲಿ ಮಾತ್ರವೇ ಗಣಿಗಾರಿಕೆ ನಡೆಸಲು ಅನುಮತಿ ನೀಡಲಾಗಿರುತ್ತದೆ.<br>• ಕಲ್ಲುಗಣಿ ತ್ಯಾಜ್ಯ ಈ ರೀತಿ ದಾಸ್ತಾನು ಮಾಡಿದ ಗಣಿಗಾರಿಕೆಯಿಂದ ರೈತರ ಜಮೀನಿಗೆ ಹಾನಿಯಾಗುತ್ತಿರುವ ಕುರಿತು ಯಾವುದೇ ದೂರುಗಳು ಸ್ವೀಕೃತಗೊಂಡಿರುವುದು ಕಂಡುಬಂದಿರುವುದಿಲ್ಲ. |

**ಸಂಖ್ಯೆ: ಸಿಐ 33 ಎಂಎಂಎಂ 2026**

(signature)

**(ಎಸ್.ಎಸ್. ಮಲ್ಲಿಕಾರ್ಜುನ್)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು